ಮೆ//ಅಂಜಲಿತಾಯಿ ಕೇನ್ಸ ಪ್ರೈವೇಟ್ ಲಿಮಿಟೆಡ್, ಇವರು ಹಲಗಾ ಗ್ರಾಮ ಖಾನಾಪೂರ ತಾಲ್ಲೂಕು ಬೆಳಗಾವಿ ಜಿಲ್ಲೆ , ಸರ್ವೆ ನಂ. 36, ಬ್ಲಾಕ್1 ಮತ್ತು ಬ್ಲಾಕ್ 2, 35 (ಪಿ), 50/4,53/3 ರಲ್ಲಿ ಪ್ರಸ್ತಾಪಿತ 90 ಕೆ ಎಲ್ ಪಿ ಡಿ (ಕಬ್ಬಿನ ರಸ/ಸಿರಪ್/ಕಾಕಂಬಿ ಆಧಾರಿತ) ಡಿಸ್ಟಿಲರಿ ಘಟಕ ಮತ್ತು ಇನ್ಸಿನರೇಷನ್ ಬಾಯ್ಲರ ನಿಂದ 3 ಮೆಗಾ ವ್ಯಾಟ್/ಘಂಟೆಗೆ ಸಹ ವಿದ್ಯುತ್ ಉತ್ಪಾದನಾ ಘಟಕವನ್ನು ಸ್ಥಾಪಿಸಲು ಉದ್ದೇಶಿಸಿರುತ್ತಾರೆ. ಸದರಿ ಯೋಜನೆಯ ಕುರಿತಂತೆ ದಿನಾಂಕ: 07-07-2020 ರಂದು ಬೆಳಿಗ್ಗೆ 11.00 ಗಂಟೆಗೆ ಮೆ. ಅಂಜಲಿತಾಯಿ ಕೇನ್ಸ ಪ್ರೈವೇಟ್ ಲಿಮಿಟೆಡ್, ಸರ್ವೆ ನಂ. 36, ಬ್ಲಾಕ್1 ಮತ್ತು ಬ್ಲಾಕ್ 2, 35 (ಪಿ), 50/4,53/3, ಹಲಗಾ ಗ್ರಾಮ ಖಾನಾಪೂರ ತಾಲ್ಲೂಕು ಬೆಳಗಾವಿ ಜಿಲ್ಲೆ ರಲ್ಲಿ ಮಾನ್ಯ ಅಪರ ಜಿಲ್ಲಾಧಿಕಾರಿಗಳು, ಬೆಳಗಾವಿ ಇವರ ಅಧ್ಯಕ್ಷತೆಯಲ್ಲಿ ಜರುಗಿದ ಪರಿಸರ ಸಾರ್ವಜನಿಕ ಸಭೆಯ ನಡುವಳಿಗಳು:

ಸ್ಥಳ: ಮೆ//ಅಂಜಲಿತಾಯಿ ಕೇನ್ಸ ಪ್ರೈವೇಟ್ ಲಿಮಿಟೆಡ್, ಸರ್ವೆ ನಂ. 36, ಬ್ಲಾಕ್1 ಮತ್ತು ಬ್ಲಾಕ್ 2, 35 (ಪಿ), 50/4, 53/3, ಹಲಗಾ ಗ್ರಾಮ ಖಾನಾಪೂರ ತಾಲ್ಲೂಕು ಬೆಳಗಾವಿ ಜಿಲ್ಲೆ.

| | | |
|---|---|---|
| ಹಾಜರಿದ್ದ ಅಧಿಕಾರಿಗಳ ವಿವರ | : | ಅನುಬಂಧ-1 |
| ಯೋಜಿತ ಉದ್ದಿಮೆದಾರರ ಪರವಾಗಿ ಹಾಜರಿದ್ದ ಅಧಿಕಾರಿಗಳು/ ಪ್ರತಿನಿಧಿಗಳ ವಿವರ | : | ಅನುಬಂಧ-2 |
| ಭಾಗವಹಿಸಿದ ಸಾರ್ವಜನಿಕರ ವಿವರ | : | ಅನುಬಂಧ-3 |
| ಯೋಜನಾದಾರರು ಮಂಡಿಸಿದ ಪ್ರಸ್ತಾಪಿತ ಯೋಜನೆಯ ಸಾರಾಂಶ | : | ಅನುಬಂಧ-4 |

**ಪೀಠಿಕೆ:**

ಮೆ//ಅಂಜಲಿತಾಯಿ ಕೇನ್ಸ ಪ್ರೈವೇಟ್ ಲಿಮಿಟೆಡ್, ಇವರು ಹಲಗಾ ಗ್ರಾಮ ಖಾನಾಪೂರ ತಾಲ್ಲೂಕು ಬೆಳಗಾವಿ ಜಿಲ್ಲೆ, ಸರ್ವೆ ನಂ. 36, ಬ್ಲಾಕ್ 1 ಮತ್ತು ಬ್ಲಾಕ್ 2, 35 (ಪಿ), 50/4, 53/3 ರಲ್ಲಿ ಪ್ರಸ್ತಾಪಿತ 90 ಕೆ.ಎಲ್.ಪಿ.ಡಿ (ಕಬ್ಬಿನ ರಸ/ಸಿರಪ್/ಕಾಕಂಬಿ ಆಧಾರಿತ) ಡಿಸ್ಟಿಲರಿ ಘಟಕ ಮತ್ತು ಇನ್ಸಿನರೇಷನ್ ಬಾಯ್ಲರ ನಿಂದ 3 ಮೆಗಾ ವ್ಯಾಟ್/ಘಂಟೆಗೆ ಸಹ ವಿದ್ಯುತ್ ಉತ್ಪಾದನಾ ಘಟಕವನ್ನು ಸ್ಥಾಪಿಸಲು ಉದ್ದೇಶಿಸಿರುತ್ತಾರೆ. ಸದರಿ ಯೋಜನೆಯ ಪ್ರವರ್ತಕರು ಪರಿಸರ ಆಘಾತ ಅಧ್ಯಯನದ ಅಧಿಸೂಚನೆ ದಿನಾಂಕ: 14-09-2006 (ತಿದ್ದುಪಡಿ ದಿನಾಂಕ: 01-12-2009)ರ ಪ್ರಕಾರ ಪರಿಸರ ಮತ್ತು ಅರಣ್ಯ ಮಂತ್ರಾಲಯ, ಭಾರತ ಸರಕಾರ ಇವರಿಂದ ಪರಿಸರ ವಿಮೋಚನೆ ಪತ್ರ ಪಡೆಯಬೇಕಾಗಿರುತ್ತದೆ. ಮತ್ತು ಪರಿಸರ ಆಲಿಕೆ ಸಭೆಯನ್ನು ನಡೆಸಬೇಕಾಗಿರುತ್ತದೆ. ಕರ್ನಾಟಕ ಸರ್ಕಾರದ ಪರಿಸರ, ಅರಣ್ಯ ಮಂತ್ರಾಲಯ ಇವರ Terms of reference (TOR) (ಟಿ.ಒ.ಆರ್) ಪತ್ರ ಸಂಖ್ಯೆ: SEIAA 37 IND 2019, ದಿನಾಂಕ: 11-12-2019 ರಂತೆ ಹಾಗೂ ಉದ್ದಿಮೆ ನಿವೇದನೆ ಪತ್ರ ದಿನಾಂಕ: 10-02-2020ರ ಪ್ರಕಾರ ಅಂತಿಮಗೊಳಿಸಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸಲು ಯೋಜನಾ ಸಲಹೆಗಾರರಿಗೆ ತಿಳಿಸಿರುತ್ತಾರೆ. ಅದರಂತೆ ಈ ಯೋಜನೆಗೆ ಕರಡು ಪರಿಸರ ಆಘಾತ ಅಂದಾಜೀಕರಣ ವರದಿಯನ್ನು ಮತ್ತು ಇದರ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಅವತರಣಿಕೆಯ ಸಂಕ್ಷಿಪ್ತ ವರದಿಯನ್ನು ಮಂಡಳಿಗೆ ಸಲ್ಲಿಸಿ, ಕೇಂದ್ರ ಸರ್ಕಾರದ ಪರಿಸರ ಆಘಾತ ಅಧ್ಯಯನ ಅಧಿಸೂಚನೆ-2006ರ ಪ್ರಕಾರ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸುವಂತೆ ಸದರಿಯವರು ಕೋರಿಕೊಂಡಿರುತ್ತಾರೆ.

ಈ ಹಿನ್ನಲೆಯಲ್ಲಿ, ಬೆಳಗಾವಿ ಜಿಲ್ಲಾ ವ್ಯಾಪ್ತಿಯ ಸದರಿ ಯೋಜನೆಯ ಕುರಿತಂತೆ ಪರಿಸರ ಸಾರ್ವಜನಿಕ ಸಭೆ, ಮೆ//ಅಂಜಲಿತಾಯಿ ಕೇನ್ಸ ಪ್ರೈವೇಟ್ ಲಿಮಿಟೆಡ್, ಇವರು ಹಲಗಾ ಗ್ರಾಮ ಖಾನಾಪೂರ ತಾಲ್ಲೂಕು ಬೆಳಗಾವಿ ಜಿಲ್ಲೆ ಸರ್ವೆ. ನಂ. 36, ಬ್ಲಾಕ್ 1 ಮತ್ತು ಬ್ಲಾಕ್ 2, 35 (ಪಿ), 50/4, 53/3 ರಲ್ಲಿ ಪ್ರಸ್ತಾಪಿತ 90 ಕೆ.ಎಲ್.ಪಿ.ಡಿ (ಕಬ್ಬಿನ ರಸ/ಸಿರಪ್/ಕಾಕಂಬಿ ಆಧಾರಿತ) ಡಿಸ್ಟಿಲರಿ ಘಟಕ ಮತ್ತು ಇನ್ಸಿನರೇಷನ್ ಬಾಯ್ಲರನಿಂದ 03 ಮೆಗಾ ವ್ಯಾಟ್/ಘಂಟೆಗೆ ಸಹ ವಿದ್ಯುತ್ ಉತ್ಪಾದನಾ ಘಟಕವನ್ನು ಸ್ಥಾಪಿಸಲು ಉದ್ದೇಶಿಸಿರುವ ಹಿನ್ನಲೆಯಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರಿಂದ ಪರಿಸರ ಕುರಿತು ಸಾರ್ವಜನಿಕ ಸಭೆಯನ್ನು ದಿನಾಂಕ: 07-07-2020 ರಂದು ಬೆಳಿಗ್ಗೆ 11.00 ಗಂಟೆಗೆ ಏರ್ಪಡಿಸಲಾಗಿರುತ್ತದೆ.

ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು, ಪರಿಸರ ಸಾರ್ವಜನಿಕ ಸಭೆಯ ಪತ್ರಿಕಾ ಪ್ರಕಟಣೆಯನ್ನು ರಾಜ್ಯ ಮಟ್ಟದ ಪತ್ರಿಕೆಗಳಾದ "ಪ್ರಜಾ ವಾಣಿ" ದಲ್ಲಿ ದಿನಾಂಕ: 07-06-2020 ರಂದು ಮತ್ತು "ದಿ ಹಿಂದು" (ಆಂಗ್ಲ ಭಾಷೆ) ಪತ್ರಿಕೆಯಲ್ಲಿ 07-06-2020 ರಂದು ಹಾಗೂ ಜಿಲ್ಲಾ ಮಟ್ಟದಲ್ಲಿ ಸ್ಥಳೀಯ ಪತ್ರಿಕೆಯಾದ "ವಿಜಯ ವಾಣಿ" (ಕನ್ನಡ) ಪತ್ರಿಕೆಯಲ್ಲಿ ದಿನಾಂಕ: 08-06-2020 ರಂದು ನೀಡಿ ಯೋಜನಾ ಸ್ಥಳದಲ್ಲಿ ವಾಸವಿರುವ ಆಸಕ್ತ ನಿವಾಸಿಗಳು, ಪರಿಸರ ಆಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆ-ಟಿಪ್ಪಣಿಗಳನ್ನು ಹಾಗೂ ಅಹವಾಲುಗಳನ್ನು ಮೌಖಿಕವಾಗಿ/ಲಿಖಿತ/ಇ-ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ (ಮಾನ್ಯ ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ) ಇವರಿಗೆ ಈ ಅಧಿಸೂಚನೆ ಪ್ರಕಟಣೆಯಾದ 30 ದಿನಗಳೊಳಗೆ ಸಲ್ಲಿಸುವಂತೆ ತಿಳಿಸಿ ಪತ್ರಿಕಾ ಪ್ರಕಟಣೆ ನೀಡಲಾಗಿತ್ತು. ಅಲ್ಲದೇ, ಸದರಿ ಯೋಜನೆಯ ಪರಿಸರ ಆಘಾತ ಅಂದಾಜೀಕರಣ ವರದಿಯನ್ನು ಹಾಗೂ ಕಾರ್ಯಕಾರಿ ಸಾರಾಂಶಗಳ ವರದಿಗಳನ್ನು ಸಾರ್ವಜನಿಕರ ಪರಾಮರ್ಶೆಗಾಗಿ ಜಿಲ್ಲಾಧಿಕಾರಿಗಳ ಕಛೇರಿ, ಬೆಳಗಾವಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ಬೆಳಗಾವಿ, ಜಿಲ್ಲಾ ಕೈಗಾರಿಕಾ ಕೇಂದ್ರ, ಬೆಳಗಾವಿ, ಗ್ರಾಮ ಪಂಚಾಯತ್ ಕಾರ್ಯಾಲಯ ಹಲಗಾ ಗ್ರಾಮ, ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಳಗಾವಿ-1, ಪರಿಸರ ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ, ಬೆಂಗಳೂರು ಹಾಗೂ ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು ಈ ಕಛೇರಿಗಳಲ್ಲಿ ಇಡಲಾಗಿತ್ತು.

ದಿನಾಂಕ: 07-07-2020 ರಂದು ಮೆ//ಅಂಜಲಿತಾಯಿ ಕೇನ್ಸ ಪ್ರೈವೇಟ್ ಲಿಮಿಟೆಡ್ ಹಲಗಾ ಗ್ರಾಮ ಖಾನಾಪೂರ ತಾಲ್ಲೂಕು ಮತ್ತು ಬೆಳಗಾವಿ ಜಿಲ್ಲೆ, ಸರ್ವೆ ನಂ. 36, ಬ್ಲಾಕ್ 1 ಮತ್ತು ಬ್ಲಾಕ್ 2, 35 (ಪಿ), 50/4, 53/3 ರಲ್ಲಿ ಪರಿಸರ ಸಾರ್ವಜನಿಕ ಸಭೆ ನಡೆಸಲಾಯಿತು. ಶ್ರೀಮತಿ, ರಾಜಶ್ರೀ ಜ ಕುಳ್ಳಿ, ಉಪ ಪರಿಸರ ಅಧಿಕಾರಿ ಇವರು ಶ್ರೀ. ಅಶೋಕ ದುಡಗುಂಟಿ ಕ.ಆ.ಸೇ. ಹಿ.ಶ್ರೇ, ಮಾನ್ಯ ಅಪರ ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ (ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ) ಮತ್ತು ಶ್ರೀ. ವಿಜಯಕುಮಾರ.ಟಿ.ಕಡಖಭಾವಿ, ಹಿರಿಯ ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಧಾರವಾಡ, ಶ್ರೀ. ಗೋಪಾಲಕೃಷ್ಣ ಬಿ ಸಣತಂಗಿ, ಪರಿಸರ ಅಧಿಕಾರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಳಗಾವಿ, ಡಾ. ಅಂಜಲಿ ಹೆಚ್ ನಿಂಬಾಳ್ಕರ್, ಅಧ್ಯಕ್ಷರು, ಮೆ//ಅಂಜಲಿತಾಯಿ ಕೇನ್ಸ ಪ್ರೈವೇಟ್ ಲಿಮಿಟೆಡ್, ಹಲಗಾ ಗ್ರಾಮ ಖಾನಾಪೂರ ತಾಲೂಕು ಬೆಳಗಾವಿ ಜಿಲ್ಲೆ, ಸದರಿಯವರಿಗೆ ಹಾಗೂ ಸಭೆಗೆ ಆಗಮಿಸಿದಂತಹ ಎಲ್ಲಾ ಅಧಿಕಾರಿಗಳನ್ನು ಹಾಗೂ ಸಾರ್ವಜನಿಕರು, ರೈತರು, ಮಾಧ್ಯಮ ಮಿತ್ರರನ್ನು ಮತ್ತು ಯೋಜನೆಯ ಪ್ರವರ್ತಕರನ್ನು ಸ್ವಾಗತಿಸಿದರು. ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ ಇವರ ಪರಿಸರ ಆಘಾತ ಅಧಿಸೂಚನೆ-2006 ರನ್ವಯ ಸದರಿ ಪರಿಸರ ಸಾರ್ವಜನಿಕ ಸಭೆ ನಡೆಸಲು ತಗೆದುಕೊಂಡ ಕ್ರಮವನ್ನು ವಿವರಿಸಿದರು ಮತ್ತು ಸದರಿ ಯೋಜನೆಯು ಪರಿಸರ ಆಘಾತ ಅಧಿಸೂಚನೆ, 2006 ರಡಿಯಲ್ಲಿ ಬರುತ್ತದೆ ಹಾಗೂ ಪರಿಸರ ಸಾರ್ವಜನಿಕ ಸಭೆ ನಡೆಸಬೇಕಾಗಿರುವ

ಅವಶ್ಯಕತೆ ಕುರಿತು ನೆರೆದಿದ್ದ ಸಾರ್ವಜನಿಕರಿಗೆ ವಿವರಿಸಿದರು. ಮಾನ್ಯ ಅಪರ ಜಿಲ್ಲಾಧಿಕಾರಿಗಳು ಈ ಸಭೆಯ ಅಧ್ಯಕ್ಷತೆ ವಹಿಸಿ ಈ ಸಭೆಯನ್ನು ನಡೆಸಿಕೊಡಬೇಕೆಂದು ಮಾನ್ಯ ಅಪರ ಜಿಲ್ಲಾಧಿಕಾರಿಗಳಲ್ಲಿ ಕೋರಿದರು.

**ಶ್ರೀ. ಗೋಪಾಲಕೃಷ್ಣ ಬಿ ಸನತಂಗಿ– ಪರಿಸರ ಅಧಿಕಾರಿಗಳು ಬೆಳಗಾವಿ:** ಇವರು ಸದರಿ ಸಭೆಗೆ ಆಗಮಿಸಿದಂತ ಎಲ್ಲಾ ಅಧಿಕಾರಿಗಳನ್ನು ಹಾಗೂ ಸಾರ್ವಜನಿಕರು, ರೈತರು, ಮಾಧ್ಯಮ ಮಿತ್ರರನ್ನು ಮತ್ತು ಯೋಜನೆಯ ಪ್ರವರ್ತಕರನ್ನು ಸ್ವಾಗತಿಸಿ, ಮುಂದುವರೆದು, ಸದರಿ ಯೋಜನೆ ಕುರಿತಂತೆ ಯೋಜನೆಯ ಪ್ರವರ್ತಕರು ತಾಂತ್ರಿಕ ವರದಿಯ ಶಕ್ತಿಬಿಂದು ಪ್ರದರ್ಶವನ್ನು ವಿವರಿಸುತ್ತಾರೆ ಅದನ್ನು ತಾವುಗಳು ಆಲಿಸಬೇಕೆಂದು ಸಭೆಯಲ್ಲಿ ಆಗಮಿಸಿದ ಇಲ್ಲ ಸಾರ್ವಜನಿಕರಿಗೆ ತಿಳಿಸಿದರು.

**ಯೋಜನೆಯ ಪ್ರವರ್ತಕರ ಪರವಾಗಿ ಪರಿಸರ ಸಲಹೆಗಾರರು:** ಸದರಿ ಯೋಜನೆಯ ತಾಂತ್ರಿಕ ವರದಿಯ ಶಕ್ತಿ ಬಿಂದುವಿನಲ್ಲಿ ವಿವರಿಸಿದ ಪ್ರಸ್ತಾಪಿತ ಸಾರಾಂಶವನ್ನು **ಅನುಬಂಧ–4** ರಲ್ಲಿ ಲಗತ್ತಿಸಿಲಾಗಿದೆ.

**ಸಭೆಗೆ ಹಾಜರಾದ ಸಾರ್ವಜನಿಕರು ಈ ಕೆಳಕಂಡಂತೆ ತಮ್ಮ ಅಹವಾಲುಗಳನ್ನು ಮಂಡಿಸಿದರು.**

1) **ನಿಂಗಪ್ಪಾ ಯಲ್ಲಪ್ಪಾ ಹೊಸೂರ:** ಮೊದಲನೆಯದಾಗಿ ಎಲ್ಲರಿಗೂ ನನ್ನ ನಮಸ್ಕಾರಗಳು, ನನ್ನ ಹೆಸರು ನಿಂಗಪ್ಪಾ ಯಲ್ಲಪ್ಪಾ ಹೊಸೂರ ಹಾಗೂ ನನ್ನ ಊರು ಹಲಸಿ ಗ್ರಾಮ. ಬೆಳಗಾವಿ ಜಿಲ್ಲೆ ಖಾನಾಪೂರ ತಾಲೂಕು ಹಲಗಾ ಗ್ರಾಮದಲ್ಲಿ ಮೆ. ಅಂಜಲಿತಾಯಿ ಕ್ರೇನ್ಸ ಲಿಮಿಟೆಡ್ ಸ್ಥಾಪನೆಯ ಬಗ್ಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಇವರು ನಡೆಸುತ್ತಿರುವ ಪರಿಸರ ಕುರಿತು ಸಾರ್ವಜನಿಕ ಆಲಿಕೆಯ ಬಗ್ಗೆ ಕುರಿತಂತೆ, ಖಾನಾಪೂರ ತಾಲೂಕು ಒಂದು ನಿರುದ್ಯೋಗಿ ಇರುವಂತಹ ತಾಲೂಕು. ಈ ತಾಲೂಕಿನಲ್ಲಿ ಯವಕರಿಗೆ ಗೌಂಡಿ ಕೆಲಸ ಹಾಗೂ ಇನ್ನಿತರೆ ಕೆಲಸಗಳಿತ್ತು. ಈ ತಾಲೂಕಿನ ಬಗ್ಗೆ ಅರಿತುಕೊಂಡು ಮತ್ತು ಎಲ್ಲ ಮಾಹಿತಿಗಳನ್ನು ಪಡೆದುಕೊಂಡು ಈ ತಾಲೂಕಿನಲ್ಲಿ ಅಂಜಲಿತಾಯಿ ಮೇಡಮ್ಮನವರು ಈ ಒಂದು ಗ್ರಾಮೀಣ ಭಾಗದಲ್ಲಿ ಕಾರ್ಖಾನೆಯನ್ನು ಮಾಡುತ್ತೀರುವುದು ನಮಗೆ ತುಂಬ ಹೆಮ್ಮೆಯ ವಿಷಯ ಮತ್ತು ಖುಷಿಕರ. ಅದೇ ರೀತಿ ಈ ಗ್ರಾಮೀಣ ಪ್ರದೇಶದಲ್ಲಿ ಇರುವಂತ ಎಲ್ಲ ಯುವಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಮತ್ತು ಈ ಖಾನಾಪೂರ ತಾಲೂಕಿಗೆ ಇನ್ನು ಖುಷಿಯಾದ ವಿಷಯಗಳನ್ನು ನಮ್ಮ ಮೇಡಮ್ಮನವರು ನಮಗೆ ತರುತ್ತಾರೆ ಎಂದು ನನ್ನ ಅನಿಸಿಕೆಗಳನ್ನು ಹೇಳುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳನ್ನು ಹೇಳುತ್ತೇನೆ.

   **ಶ್ರೀ. ಗೋಪಾಲಕೃಷ್ಣ ಬಿ ಸನತಂಗಿ– ಪರಿಸರ ಅಧಿಕಾರಿಗಳು ಬೆಳಗಾವಿ:** ಪರಿಸರ ಸಾರ್ವಜನಿಕ ಸಭೆ ಕೇವಲ ಪರಿಸರಕ್ಕೆ ಸಂಬಂಧಪಟ್ಟಿರುವುದರಿಂದ ಪರಿಸರಕ್ಕೆ ಸಂಬಂಧಪಟ್ಟ ತಮ್ಮ ಅಹವಾಲುಗಳನ್ನು, ಅನಿಸಿಕೆಗಳನ್ನು ಮಾತ್ರ ಇಲ್ಲಿ ಸಲ್ಲಿಸಬೇಕು ಎಂದು ಸಾರ್ವಜನಿಕರಲ್ಲಿ ವಿನಂತಿಸಿದರು.

2) **ಶ್ರೀ. ಬಿ.ಡಿ.ಪಾಟೀಲ–ನಂದಗಡ ಗ್ರಾಮ:** ವೇದಿಕೆಯ ಮೇಲಿನ ಎಲ್ಲ ಗಣ್ಯ ಮಾನ್ಯ ವ್ಯಕ್ತಿಗಳೇ, ಅಂಜಲಿ ತಾಯಿಯವರೇ ಮತ್ತು ರೈತ ಬಾಂಧವರೇ, ಬಂದಂತಹ ಸಿಬ್ಬಂದಿ ಅಧಿಕಾರಿಯವರೆ, ಪೋಲೀಸ್ ಡಿಪಾರ್ಟಮೆಂಟ್, ವಾರ್ತಾ ಹಾಗೂ ಎಲ್ಲರಿಗೂ ನಮಸ್ಕರಿಸಿ, ನನ್ನ ಎರಡು ಶಬ್ಧಗಳನ್ನು ಹೇಳಬಯಸುತ್ತೇನೆ. ಈ ನಮ್ಮ ತಾಲೂಕಿನಲ್ಲಿ ಏನು ಈ ಫ್ಯಾಕ್ಟರಿ ಆಗುತ್ತದೆಯೋ ಅದರ ಬಗ್ಗೆ ಎರಡು ಶಬ್ಧಗಳನ್ನು ಹೇಳಬೇಕೆಂದು ನಾನು ಬಯಸುತ್ತೇನೆ. ಮಿತ್ರರೇ, ಈ ತಾಲೂಕಿನಲ್ಲಿ ಮೊದಲನೇ ಫ್ಯಾಕ್ಟರಿ ಮಾಡಬೇಕಂತ ಈ ಭಾಗದ ಗಣ್ಯ ಮಾನ್ಯ ವ್ಯಕ್ತಿಯಾದಂತ ಬಸಪ್ಪಣ್ಣ ಯರಬಾವಿ ಇವರು ಒಂದು ಫ್ಯಾಕ್ಟರಿ ಮಾಡಬೇಕೆಂದು ವಿಚಾರ ಮಾಡಿ ಅದನ್ನು ಮಲಪ್ರಭಾ ಶುಗರ ಫಾಕ್ಟರಿ ಅಂತ ಸ್ಥಾಪನೆ ಮಾಡಿದರು. ಆ ಸ್ಥಾಪನೆ ಮಾಡುವಾಗ ಅವರಿಗೆ ಕೆಲವೊಂದು ಮಂದಿ ಅಡ್ಡಿ ಮಾಡಲಿಕ್ಕೆ ಬಂದರೂ ಸಹ ಹಾಗೂ ಹಲವಾರು ಆಮಿಷಗಳನ್ನು ತೋರಿಸಿದರೂ

ಸಹ ಸಾರ್ವಜನಿಕರ ಹಿತಕ್ಕಾಗಿ, ಜನರ ಹಿತಕ್ಕಾಗಿ, ಈ ಪರಿಸರದ ಹಿತಕ್ಕಾಗಿ ಅವರು ಉದ್ದಿಮೆಯ... ಸಹ ಸಾರ್ವಜನಿಕರ ಹಿತಕ್ಕಾಗಿ, ಜನರ ಹಿತಕ್ಕಾಗಿ, ಈ ಪರಿಸರದ ಹಿತಕ್ಕಾಗಿ ಅವರು ಉದ್ದಿಮೆಯ ನಿರ್ಮಾಣ ಮಾಡುವ ವಿಷಯದಲ್ಲಿ ನಿರ್ಧಾರ ತೆಗೆದುಕೊಂಡು ಯಶಸ್ವಿ ಮಾಡಿ ತೋರಿಸಿದರು. ಆ ಫ್ಯಾಕ್ಟರಿ ಇಷ್ಟು ಬೆಳತಲ್ಲ ಆ ಫ್ಯಾಕ್ಟರಿ ಹೆಸರು ಮಹಾರಾಷ್ಟ್ರತನಕ ಹೋಗಿ ಮುಟ್ಟಿತು. ಆ ಫ್ಯಾಕ್ಟರಿ ಪರಿಸರದಲ್ಲಿ ಹಿಡಿಸಲಾರದಷ್ಟು ಕಬ್ಬಾಯ್ತು. ಆದರೆ ಆ ಫ್ಯಾಕ್ಟರಿಗೆ ಕೆಲವೊಂದು ಹೆಗ್ಗಣಗಳು, ನರಿಗಳು, ತೋಳಗಳು ಹತ್ತಿ ಅದನ್ನು ಹಾಳು ಮಾಡಿದವು. ಆದರೆ ತದನಂತರ ಈ ಭಾಗದ ಮತ್ತೊಂದು ವ್ಯಕ್ತಿಗಳು ಆದ ನೀಲಕಂಠರಾವ್ ಸರ್ ದೇಸಾಯಿಯವರು ಸಹ ಒಂದು ಫ್ಯಾಕ್ಟರಿಯನ್ನು ನಿರ್ಮಾಣ ಮಾಡಿದರು. ಈ ಪರಿಸರ ಅತ್ಯಂತ ಉತ್ತಮ ಪರಿಸರವಿರುತ್ತದೆ ಈ ಪರಿಸರದಾಗ ಕಬ್ಬು ಬೆಳೆಯವಂತಹದು ಮತ್ತೊಂದಲ್ಲ ಎರಡು ಫ್ಯಾಕ್ಟರಿ ಆದರೂ ಸಹ ಈಗ ಇದಕ್ಕೆ ಯಾವುದು ಕೊರತೆ ಈ ಪರಿಸರಕ್ಕೆ ಬೀಳುವುದಿಲ್ಲ. ಇಂತಹ ಪರಿಸರ ಇಲ್ಲಿದ್ದು ಈ ಫ್ಯಾಕ್ಟರಿ ಆಗುವುದರಿಂದ ಇಲ್ಲಿ ಜನರಿಗೆ, ಶೈಕ್ಷಣಿಕ,ಪಂಚಾಯಿತಿಗೆ ಬಹಳ ಉಪಯೋಗವಾಗುತ್ತದೆ ಎಂದು ಭಾವಿಸಿದ್ದೇನೆ ಇದನ್ನು ಸ್ವಂತ ಫ್ಯಾಕ್ಟರಿ, ಸ್ವಂತ ಹಿಡುವಳಿ ಅಂಜಲಿ ತಾಯಿಯವರ ಕೈಯಲ್ಲಿ ಇರುವುದರಿಂದ ಇದು ಅತ್ಯಂತ ಉತ್ತಮ ರೀತಿಯಲ್ಲಿ ಸಾಗುತ್ತದೆ ಎಂದು ನನ್ನ ಭಾವನೆ ಇರುತ್ತದೆ. ಏಕೆಂದರೆ ಸಾರ್ವಜನಿಕವಾಗಿ ಮಾಡುವುದರಿಂದ "ಎಲ್ಲರೂ ಕೂಡಿ ಅಡುಗೆ ಕೆಡಸಿ ಇಟ್ಟಾಂಗ" ಆದರೆ ಸ್ವಂತ ಫ್ಯಾಕ್ಟರಿ ಆಗಿದ್ದಕ್ಕೆ ಇದು ಬಹಳ ಉತ್ತಮ ರೀತಿಯಿಂದ ನಡೆಯುತ್ತದೆ. ಈ ಪರಿಸರ ಉದ್ಧಾರ ಆಗಬೇಕೆಂದು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

3) **ತಮ್ಮಣ್ಣ ಕೋಲ್ಕಾರ:** ಎಲ್ಲರಿಗೂ ನನ್ನ ನಮಸ್ಕಾರಗಳು, ಇವತ್ತಿನ ಮಾಚಿಗಡ ಬಿಜಗರ್ಣಿಗೆ ಬಂಗಾರದ ದಿವಸ ಬಂದಿದೆ ಅಂತ ತಿಳಿದುಕೊಳ್ಳಬೇಕು. ಏಕೆಂದರೆ ಈ ಪರಿಸರದ ಸುತ್ತ ಮುತ್ತ ಹಳ್ಳಿಗಳಿವೆ ಹೊಲ ಮನೆ ಕೆಲಸ ಮಾಡುವರಿದ್ದಾರೆ. ಈ ಹೊಲಮನೆ ಮಾಡುವರು ಕೊರೋನಾ ಸೋಂಕು ಭಯದಿಂದ ಮುಂಬೈ ಪೂನಾದಿಂದ ಮಂದಿ ಬಂದಿದ್ದಾರೆ ಅವರಿಗೆ ಕೆಲಸವಿಲ್ಲ. ಕೆಲಸ ಇಲ್ಲದ್ದಕ್ಕೆ ಹೊಲಮನೆ ಮಂದಿ, ರೈತರು ಸಾಯೋ ಕಾಲ ಬಂದಿದೆ. ಅಂತಹದರಲ್ಲಿ ನಮ್ಮ ಅಂಜಲಿತಾಯಿ ನಿಂಬಾಳ್ಕರರವರು ಈ ವಿಚಾರಣೆ ಮಾಡಿ ಈ ಶುಗರ ಫ್ಯಾಕ್ಟರಿ ತಯಾರು ಮಾಡಿದ್ದಾರೆ. ಅದಕ್ಕೆ ಅವರಿಗೆ ಕೆಲಸ ಸಿಗಬಹುದು ಸುತ್ತಮುತ್ತ ಪರಿಸರದಾಗ ಕಬ್ಬು ಬೆಳೆಸುತ್ತಾರೆ ಆ ಕಬ್ಬನ್ನು ಇಲ್ಲಿ ಹಾಕಬಹುದು. ಒಂದು ನಾಲ್ಕೈದು ದುಡ್ಡು ಸಿಗಬಹುದು. ಆ ವಿಚಾರಣೆ ನೋಡಿ ಇಲ್ಲಿ ಫ್ಯಾಕ್ಟರಿ ತಯಾರು ಮಾಡಿದ್ದಾರೆ ಇದು ಒಂದು ಒಳ್ಳೆಯ ಕೆಲಸ ಆಗಿದೆ. ಈ ಜನರಿಗೆ ಇಲ್ಲಿ ಕೆಲಸ ಸಿಗುತ್ತದೆ ಎಂಬ ಉದ್ದೇಶದಿಂದ ನಾನು ಬಿಜಗರ್ಣಿ ಊರಿನಿಂದ ತಮ್ಮಣ್ಣಾ ಕೋಲ್ಕಾರ ಮಾತನಾಡಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ. ಜೈ ಹಿಂದ ಜೈ ಭಾರತ.

4) **ಅನಿಲ ಎಮ್ ಸುತಾರ:** ಈ ಸಭೆಯ ವಿಷಯ ಮಂಡಣೆಗಾಗಿ ಬಂದಂತಹ ಎಲ್ಲರಿಗೂ ಹಾರ್ದಿಕ ನಮಸ್ಕಾರಗಳು ಹಾಗೂ ಧನ್ಯವಾದಗಳು ಮೆ//ಅಂಜಲಿತಾಯಿ ಕೇನ್ಸ ಪ್ರೈವೇಟ್ ಲಿಮಿಟೆಡ್ ಇವರ ವತಿಯಿಂದ ಬೆಳಗಾವಿ ಜಿಲ್ಲೆ ಖಾನಾಪೂರ ತಾಲೂಕು ಹಲಗಾ ಗ್ರಾಮದಲ್ಲಿ ಸಕ್ಕರೆ ಕಾರ್ಖಾನೆ ಆಗ್ತಾ ಇದೆ. ಇದರಿಂದ ನಮ್ಮ ಸುತ್ತಮುತ್ತಲಿನ 10 ಊರಿನಲ್ಲಿ ವಿದ್ಯಾವಂತ ಯುವಕ ವಿದ್ಯಾರ್ಥಿಗಳು ಮತ್ತು ನಮ್ಮಂತ ಹೆಬ್ಬಟ್ಟುಗಳು ಎಲ್ಲರಿಗೂ ಕೆಲಸ ಸಿಗುತ್ತದೆ. ಬಹಳ ಚಲೋ ಆಗತೈತಿ ಈ ಕೆಲಸ ಮಾಡೋಕೆ ಯಾರ ಕೈಯಿಂದ ಆಗಿಲ್ಲ, ಆದರೆ ಈ ಕೆಲಸ ಮಾಡಲಿಕ್ಕೆ ಅಂಜಲಿತಾಯಿ ನಿಂಬಾಳ್ಕರರವರು ಸಾಧ್ಯ ಮಾಡಿದ್ದಾರೆ. ನನ್ನ ತುಂಬಾ ತುಂಬಾ ಧನ್ಯವಾದಗಳು.

5) **ಮಹಾಂತೇಶ ಕಲ್ಯಾಣಿ, ನಂದಗಡ ಗ್ರಾಮ:** ಎಲ್ಲರಿಗೂ ನನ್ನ ನಮಸ್ಕಾರಗಳು, ಇವತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಮೆ. ಅಂಜಲಿತಾಯಿ ಕೇನ್ಸ ಪ್ರೈವೇಟ್ ಲಿಮಿಟೆಡ್ ವತಿಯಿಂದ ಒಂದು ಕಾರ್ಯಕ್ರಮ ಇಟ್ಟುಕೊಂಡಿದ್ದಾರೆ. ಈ ಶುಗರ ಫ್ಯಾಕ್ಟರಿ ಆಗುವುದರಿಂದ ನಮ್ಮ ಸುತ್ತಮುತ್ತಲಿನ

ಹಳ್ಳಿಯ ಯುವಕರಿಗೆ ಹಾಗೂ ರೈತ ಬಾಂಧವರಿಗೆ ಒಳ್ಳೆಯದಾಗುವುದು. ಆದಷ್ಟು ಬೇಗ ಚಾಲನೆಯಾಗಬೇಕೆಂದು ವಿನಂತಿಸಿಕೊಳ್ಳುತ್ತೇನೆ ಎಲ್ಲರಿಗೂ ಧನ್ಯವಾದಗಳು.

6) **ಮಹಾದೇವ ಕೋಳಿ-ಲಕ್ಕೇಬೈಲ ಗ್ರಾಮ**: ಎಲ್ಲರಿಗೂ ನಮಸ್ಕಾರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹಿರಿಯ ಅಧಿಕಾರಿಗಳಿಗೆ ನಮಸ್ಕಾರ. ಮೆ. ಅಂಜಲಿತಾಯಿ ಕೇನ್ಸ ಪ್ರೈವೇಟ್ ಲಿಮಿಟೆಡ್ ಇದರ ಬಗ್ಗೆ ಯಾವುದೇ ರೀತಿಯ ಪರಿಸರ ಮಾಲಿನ್ಯ ಮತ್ತು ತೊಂದರೆ ಆಗುವುದಿಲ್ಲ ಏಕೆಂದರೆ ಮೆ. ಅಂಜಲಿತಾಯಿ ಕೇನ್ಸ ಪ್ರೈವೇಟ್ ಲಿಮಿಟೆಡ್‌ರವರಿಗೆ ನಮ್ಮ ತಾಲೂಕಿನ ವತಿಯಿಂದ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಏಕೆಂದರೆ ಇಲ್ಲಿಯ ತನಕ ಯಾರು ಈ ನಿರ್ಧಾರ ತೆಗೆದುಕೊಂಡಿರಲಿಲ್ಲ. ಏಕೆಂದರೆ ನಮ್ಮ ಖಾನಾಪೂರ ತಾಲೂಕು ಒಂದು ಅತ್ಯಂತ ಹಿಂದುಳಿದ ಪ್ರದೇಶ. ಸ್ವಾತಂತ್ರ್ಯ ಬಂದು 73 ವರ್ಷವಾದರೂ ಯಾವುದೇ ಅನುಕೂಲವಾಗಿಲ್ಲ. ನಾವು ರೈತರು ಕಬ್ಬು ಬೆಳೆಯುತ್ತೇವೆ ಆದರೂ ಸಹ ನಮ್ಮ ಮನೆಗೆ 100 ರೂಪಾಯಿ ಸಹ ಸಿಗುವುದಿಲ್ಲ ಏಕೆಂದರೆ ಬೇರೆ ಬೇರೆ ಫ್ಯಾಕರಿಯವರಿಗೆ ನಾವು ಕಬ್ಬು ಪೂರೈಸುವುದರಿಂದ ಮತ್ತು ಎಲ್ಲ ಖರ್ಚು ಲೆಕ್ಕ ಹಾಕಿದರೂ ಜಿರೋ ಆಗತ್ತೈತಿ ಸರ್. ಈ ಫ್ಯಾಕ್ಟರಿ ಕಟ್ಟುವುದರಿಂದ ಪರಿಸರಕ್ಕೆ ಯಾವುದೇ ತೊಂದರೆಯಾಗುವುದಿಲ್ಲ ಇದನ್ನು ನಾನು ನೂರಕ್ಕೆ ನೂರು ಹೇಳುತ್ತೇನೆ ಸರ್. ಈ ಫ್ಯಾಕ್ಟರಿ ಕಟ್ಟುವುದರಿಂದ ಖಾನಾಪೂರ ತಾಲೂಕಿನ ರೈತರು ತಮಗೆ ಹಾಗೂ ಅಂಜಲಿ ತಾಯಿಯವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಯಾವುದೇ ರೀತಿಯಿಂದ ಇಲ್ಲಿ ಪರಿಸರಕ್ಕೆ ತೊಂದರೆಯಾಗುವುದಿಲ್ಲ ಇದು ಸ್ಪಷ್ಟವಾಗಿದೆ ಸರ್. ತಾವು ದಯಮಾಡಿ ಆದಷ್ಟು ಬೇಗ ಫ್ಯಾಕ್ಟರಿ ಕಟ್ಟಲಿಕ್ಕೆ ಪರ್ಮಿಷನ್ ಕೊಡಬೇಕು ಹಾಗೂ ಎಲ್ಲ ರೈತರ ಯುವಕರ ತೊಂದರೆಯನ್ನು ತಾವುಗಳು ಗಮನಕ್ಕೆ ತೆಗೆದುಕೊಂಡು ಆದಷ್ಟು ಬೇಗ ಫ್ಯಾಕ್ಟರಿ ಕಟ್ಟಲಿಕ್ಕೆ ಅನುಮತಿ ನೀಡಬೇಕೆಂದು ಹೇಳಿ ತಮಗೆ ಧನ್ಯವಾದಗಳು.

7) **ಪಾಂಡುರಂಗ ಪಾಟೀಲ-ಮೆರಡಾ ಗ್ರಾಮ**: ಎಲ್ಲರಿಗೂ ನನ್ನ ನಮಸ್ಕಾರ, ನನ್ನ ಹೆಸರು ಪಾಂಡುರಂಗ ಪಾಟೀಲ, ಮೆರಡಾ ಊರಿನಿಂದ ಬಂದಿರುತ್ತೇನೆ. ನನಗೆ 32 ವರ್ಷ ವಯಸ್ಸು ನಾನು ಒಬ್ಬ ರೈತ ಕುಟುಂಬದಿಂದ ಬಂದಂತಹ ಯುವಕ. ಇವತ್ತು ಕೋವಿಡ್-19 ನಿಂದ ಯಾರು ಬಂದಿಲ್ಲ ಅದಕ್ಕೆ ನಾನು ಅಧಿಕಾರಿಗಳಲ್ಲಿ ಕ್ಷಮೆ ಕೋರುತ್ತೇನೆ. ನನ್ನ ಹೊಲದಲ್ಲಿ ನಾನು 500 ಟನ್ ಕಬ್ಬು ಬೆಳೆಯುತ್ತೇನೆ ಮತ್ತು ಕಬ್ಬು ಬೆಳೆಯುವುದಕ್ಕೆ ಇಲ್ಲಿ ಒಳ್ಳೆಯ ವಾತಾವರಣವಿದೆ. ಕರ್ನಾಟಕದಲ್ಲಿ ಹೆಚ್ಚು ಕಬ್ಬು ಬೆಳೆಯುವ ತಾಲೂಕು ಖಾನಾಪೂರವಾಗಿರುತ್ತದೆ. ಪರಿಸರ ಮಾಲಿನ್ಯಕ್ಕೆ ಏನು ತೊಂದರೆಯಾಗುವುದಿಲ್ಲ ಈ ಫ್ಯಾಕ್ಟರಿ ಇಲ್ಲಿ ಆಗಬೇಕು ನಮ್ಮಂತಹ ಯುವಕರಿಗೆ ವ್ಯವಸಾಯ ಉದ್ಯೋಗ ಸೃಷ್ಠಿಯಾಗುತ್ತದೆ. ಅದಕ್ಕೆ ಆದಷ್ಟು ಬೇಗ ಫ್ಯಾಕ್ಟರಿ ಚಾಲು ಆಗಬೇಕು ಅದಕ್ಕೆ ನಾನು ದಯವಿಟ್ಟು ನಿಮ್ಮೆಲ್ಲರಿಗೂ ಈ ಫ್ಯಾಕ್ಟರಿ ಚಾಲೂ ಆಗುವುದರಿಂದ ಏನು ತೊಂದರೆಯಾಗುವುದಿಲ್ಲವೆಂದು ಹೇಳುತ್ತಾ ನನ್ನ ಮಾತು ಮುಗಿಸುತ್ತೇನೆ.

8) **ಸುನೀಲ ಹಂಜಿ**: ನನ್ನ ಹೆಸರು ಸುನೀಲ ಸಿ ಹಂಜಿ, ಹಲಸಿ ಗ್ರಾಮದವ ಇವತ್ತು ಈ ಕಾರ್ಖಾನೆಗೆ ಆದಷ್ಟು ಬೇಗ ಅನುಕೂಲ ಮಾಡಿಕೊಡಬೇಕು ಮತ್ತು ಆದಷ್ಟು ಬೇಗ ಕಾರ್ಖಾನೆಗೆ ಪರ್ಮಿಷನ್ ಸಿಗಬೇಕು. ಇದರಿಂದ ಯುವಕರಿಗೆ ಹಾಗೂ ಹಳ್ಳಿಗಳಿಗೆ ಅನುಕೂಲವಾಗುತ್ತದೆ.

9) **ಜಿ.ಎ.ಟೇಕಡಿ**: ಎಲ್ಲರಿಗೂ ನನ್ನ ನಮಸ್ಕಾರಗಳು ಈ ನಮ್ಮ ಖಾನಾಪೂರ ತಾಲೂಕಿನಲ್ಲಿ ಮೆ. ಅಂಜಲಿತಾಯಿ ಕೇನ್ಸ ಪ್ರೈವೇಟ್ ಲಿಮಿಟೆಡ್ ಏನು ಆಗ್ತಾ ಇದೆ ಇದು ಆಗುವುದು ಬಹಳ ಜರೂರು ಇರುತ್ತದೆ. ಇಲ್ಲಿ ಸಕ್ಕರೆ ಪ್ರಮಾಣ ಜಾಸ್ತಿ ಇರುತ್ತದೆ ಎರಡನೆಯದಾಗಿ ಇಲ್ಲಿಯ ಜನ ಖಾಲಿ ಇರುತ್ತಾರೆ ಮತ್ತು ವ್ಯಸಾಯ ಮಾಡಲಿಕ್ಕೆ ಜಮೀನುಗಳಿವೆ ಆದರೆ ಜನಗಳಿಲ್ಲ ಎಲ್ಲರೂ ಬೇರೆ ಸ್ಥಳಗಳಿಗೆ ಅಂದರೆ ಗೋವಾ, ಮಹಾರಾಷ್ಟ್ರಕ್ಕೆ ಹೋಗುತ್ತಾರೆ.ಇಲ್ಲಿ ಸ್ವಂತ ಜಮೀನುಗಳಿದ್ದು ಬೇರೆಕಡೆ ಹೋಗಿ ಹಮಾಲಿ ಮಾಡುವುದು ಬೇರೆ ಏನು ಮಾಡುತ್ತಾರೆ ನಮ್ಮ ಮೇಡಮ್ಮ ಶ್ರೀಮತಿ ಅಂಜಲಿ ಹೇಮಂತ ನಿಂಬಾಳ್ಕರ, ಶಾಸಕರು ಇಲ್ಲಿಯ ಜನರಿಗೆ

ಏನಾದರೂ ಮಾಡಬೇಕು ಇಲ್ಲಿಯವರೆಗೆ ಆಯ್ಕೆಯಾದ ಶಾಸಕರಾಗಲಿ ಅಥವಾ ಯಾವುದೇ ಜನಪ್ರ... ಏನು ಮಾಡಿಲ್ಲ. ಮೊದಲನೆಯದಾಗಿ ಕರ್ನಾಟಕದಲ್ಲಿ ಹಿಂದುಳಿದ ತಾಲೂಕುವೆಂದರೆ ಖಾನಾಪೂರ ... ಇರುತ್ತದೆ. ಇಲ್ಲಿ ಇವತ್ತಿನವರೆಗೂ ಯಾವುದೇ ಕಂಪನಿಗಳಾಗ ಇಲ್ಲ. ಅದರ ಸಲುವಾಗಿ ಇವತ್ತು ಖಾನಾಪೂರ ತಾಲೂಕಿನಲ್ಲಿ ಏನು ಶುಗರ ಫ್ಯಾಕ್ಟರಿ ಆಗುತ್ತಿದೆಯೋ ಇದು ಬೇಗನೆ ಆಗಬೇಕು ಅದರ ಪರ್ಮಿಷನ್‌ಗಾಗಿ ಏನೂ ತೊಂದರೆ ಆಗಬಾರದೆಂದು ನನ್ನ ಪರವಾಗಿ ವಿನಂತಿಯಾಗಿರುತ್ತದೆ.

10) ಶ್ರೀ. ವಿಜಯಕುಮಾರ ಕಡಕಭಾವಿ- ಹಿರಿಯ ಪರಿಸರ ಅಧಿಕಾರಿಗಳು ಧಾರವಾಡ: ಬೇರೆ ಯಾರಾದರೂ ಇದ್ರೆ ತಮ್ಮ ಅನಿಸಿಕೆಗಳನ್ನು, ಅಭಿಪ್ರಾಯಗಳನ್ನು ಈ ಸಭೆಯ ಮುಂದೆ ತರುವುದಕ್ಕೆ ಆಸಕ್ತರಿದ್ದರೆ ಅವರಿಗೆ ಇನ್ನೊಂದು ಅವಕಾಶ ಕೊಡುತ್ತೇವೆ. ಯಾರಾದರೂ ಇದ್ದೀರಾ? ಎಂದು ಕೇಳಿದರು. ಬಹುಶಃ ಯಾರು ಇಲ್ಲ ಅಂತ ಅನಿಸುತ್ತೆ. ಈ ಒಂದು ಪರಿಸರ ಕುರಿತು ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಿದಂತಹ ಎಲ್ಲರಿಗೂ ನನ್ನ ನಮಸ್ಕಾರಗಳನ್ನು ತಿಳಿಸುತ್ತಾ, ಇವತ್ತಿನ ಪರಿಸರ ಕುರಿತು ಸಾರ್ವಜನಿಕ ಸಭೆ ಮೆ. ಅಂಜಲಿತಾಯಿ ಕೇನ್ಸ ಪ್ರೈವೇಟ್ ಲಿಮಿಟೆಡ್ ಇವರು ಈ ಒಂದು ಜಾಗದಲ್ಲಿ ಅಂದರೆ ಸರ್ವೆ ನಂ. 36, ಬ್ಲಾಕ್ 1 ಮತ್ತು ಬ್ಲಾಕ್ 2, 35 (ಪಿ), 50/4, 53/3 ಹಲಗಾ ಗ್ರಾಮದ ಒಟ್ಟು ಜಾಗದಲ್ಲಿ ಎಕರೆ 34ಎಕರೆ 23 ಗುಂಟೆ ಜಾಗದಲ್ಲಿ ಅವರು 90 ಕೆ.ಎಲ್.ಪಿ.ಡಿ ಅಂದರೆ 90,000 ಲೀಟರ ಒಂದು ದಿನಕ್ಕೆ ಕಬ್ಬಿನ ರಸದಿಂದ ಹಾಗೂ ಮೊಲಾಸಿಸ್‌ದಿಂದ Ethnol ಘಟಕವನ್ನು ಸ್ಥಾಪನೆ ಮಾಡಲಿಕ್ಕೆ ಹಾಗೂ ಘಟಕದಲ್ಲಿ ಏನು ಸ್ಥಾಪನೆಯಾಗುತ್ತಿರುವ ಬಾಯ್ಲರನಿಂದ 03 ಮೆಗಾವ್ಯಾಟ/ಘಂಟೆಗೆ ವಿದ್ಯುತನ್ನು ಸಹ ಅವರು ಜನರೇಟ್ ಮಾಡುವ ಒಂದು ಉದ್ದೇಶವನ್ನು ಇಟ್ಟುಕೊಂಡು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಇಂತಹ ಒಂದು ಉದ್ದೇಶಿತ ಕಾರ್ಖಾನೆಯ ಸ್ಥಾಪನೆ ಅನುಮತಿಗಾಗಿ ಭಾರತ ಸರ್ಕಾರದ ಅರಣ್ಯ ಮತ್ತು ಪರಿಸರ ಮಂತ್ರಾಲಯಯದ EIA Notification 14-09-2006 ರ ಪ್ರಕಾರ ಇಂತಹ ಪ್ರೋಜೆಕ್ಟ ಕವರ ಆಗಿರುವುದರಿಂದ ನಮ್ಮ ಸರ್ಕಾರದ ವತಿಯಿಂದ Environmental Clearance ಪರಿಸರ ವಿಮೋಚನಾ ಪತ್ರವನ್ನು ನೀಡುವುದಕ್ಕಿಂತ ಮುಂಚಿತವಾಗಿ ನಾವು ಪರಿಸರ ಕುರಿತು ಸಾರ್ವಜನಿಕರಿಗೆ ಮಾಹಿತಿಯನ್ನು ನೀಡಿ, ಸಾರ್ವಜನಿಕರ ಅಭಿಪ್ರಾಯಗಳನ್ನು ಪಡೆದುಕೊಳ್ಳುವುದು ಸಹ EIA Notification ಭಾಗವಾಗಿರುವುದರಿಂದ ಇವತ್ತಿನ ಈ ಸಭೆಯನ್ನು ನಾವು ತಮಗಾಗಿ ತಮ್ಮ ಅಭಿಪ್ರಾಯಗಳನ್ನು ಪಡೆಯುವ ಸಲುವಾಗಿ ಈ ಸಭೆಯನ್ನು ಏರ್ಪಾಡು ಮಾಡಿದ್ದೀವಿ. ಮುಖ್ಯವಾಗಿ ಈ ಸಭೆಯ ಒಂದು ಉದ್ದೇಶ ಅಂತ ಅಂದರೆ EnvironmentalConsultants ರವರು ತಮ್ಮ ಈ ಉದ್ದೇಶಿತ ಉದ್ದಿಮೆಯಿಂದ ಏನೇನು ಇಂಡಸ್ಟ್ರೀಯಲ್ ಪಲ್ಯೂಷನ್ ಆಗುತ್ತದೆ ಒಂದು ಇಂಡಸ್ಟ್ರಿ ಸ್ಥಾಪನೆಯಾಗಿ ಕಾರ್ಯಾಚರಣೆಯಿಂದ ಆಗುವಂತಹ ಮಾಲಿನ್ಯಕಾರಕಗಳು ಏನಿವೆ ಅದನ್ನು ಯಾವ ರೀತಿಯಾಗಿ ಅವರು ಅತ್ಯಂತ ನಿಖರವಾಗಿ Wthin the limits ಬರುವ ರೀತಿಯಲ್ಲಿ ಅದನ್ನು ಅವರು ಕಂಟ್ರೋಲ್ ಮಾಡುತ್ತಾರೆ ಅಂತಹ ಮಾಹಿತಿಯನ್ನು ಒಂದು Draft Impact assessment report ನ್ನು ಮಾಡಿ ಅದನ್ನು ಈಗಾಗಲೇ ಅವರು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಹಾಗಾಗಿ Environmental Consultants ರವರು ಮಾಡಿರುವಂತಹ ರಿಪೋರ್ಟ ಅದನ್ನು ತಮ್ಮ ಮುಂದೆ ಈಗಾಗಲೇ ಮಂಡಿಸಿದ್ದಾರೆ. ಆದ್ದರಿಂದ ಈ ವರದಿಯನ್ನು ಸಹ ಒಂದು ತಿಂಗಳ ಮುಂಚಿತವಾಗಿ ನಾವು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ವತಿಯಿಂದ ಹಿಂದು ಪೇಪರ ಮತ್ತು ಪ್ರಜಾ ವಾಣಿ ಪೇಪರಗಳಲ್ಲಿ ಒಂದು ತಿಂಗಳ ಮುಂಚಿತವಾಗಿ ಇದರ ಮಾಹಿತಿಯನ್ನು ಎಲ್ಲ ಸಾರ್ವಜನಿಕರಿಗೂ ಗೊತ್ತಾಗಿ ಈ ವಿಷಯ ಕುರಿತು ಅಭಿಪ್ರಾಯ ವ್ಯಕ್ತ ಮಾಡುವುದಕ್ಕೆ ಅನುಕೂಲ ಆಗುತ್ತದೆ ಎಂಬ ಉದ್ದೇಶದಿಂದ ಒಂದು ತಿಂಗಳ ಮುಂಚಿತವಾಗಿಯೇ ಪತ್ರಿಕೆಗಳ ಮುಖಾಂತರ ತಮ್ಮೆಲ್ಲರಿಗೂ ಇದರ ಬಗ್ಗೆ ಮಾಹಿತಿಯನ್ನು ನೀಡಿದ್ದೇವೆ. ಅದೇ ರೀತಿಯಾಗಿ ಇದಕ್ಕೆ ಸಂಬಂಧಪಟ್ಟಂತಹ ಎಲ್ಲ ವರದಿಗಳನ್ನು Draft Impact

assessment report, Executive Summary ಒಟ್ಟು 07 ಕೇಂದ್ರಗಳಲ್ಲಿ ಅಂದರೆ ನಮ್ಮ ಜಿಲ್ಲಾಧಿಕಾರಿಗಳ ಕಛೇರಿ ಇರಬಹುದು, ನಮ್ಮ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಕೇಂದ್ರ ಕಛೇರಿ ಇರಬಹುದು, Divisional Office ಇರಬಹುದು, ಹಾಗೆಯೇ DIC ಇರಬಹುದು ಹಲಗಾ ಗ್ರಾಮ ಪಂಚಾಯತಿ ಇರಬಹುದು, ಖಾನಾಪೂರ ತಾಲೂಕು ಪಂಚಾಯಿತಿ ಅಥವಾ ತಹಶೀಲ್ದಾರ ಕಛೇರಿ ಇರಬಹುದು ಇಂತಹ ಎಲ್ಲ ಕೇಂದ್ರಗಳಲ್ಲಿಯೂ ಅದನ್ನು ಸಾರ್ವಜನಿಕರ Reference ಗಾಗಿ ಇಡಲಾಗಿತ್ತು. ಯಾರಾದರೂ ಈ ವಿಷಯ ತಿಳಿದುಕೊಂಡು ಇದರ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಪಡೆಯಲಿಕ್ಕಾಗಿ ಅದನ್ನು ಓದಿ ಹೆಚ್ಚಿನ ಮಾಹಿತಿಯನ್ನು ಪಡೆದುಕೊಳ್ಳಲಿಕ್ಕೆ ಅನುಕೂಲವಾಗಲಿ ಅಂತ ಉದ್ದೇಶದಿಂದ ನಾವು ಒಂದು ತಿಂಗಳ ಮುಂಚಿತವಾಗಿ ಎಲ್ಲ ವರದಿಗಳನ್ನು ಎಲ್ಲ ಕೇಂದ್ರಗಳಲ್ಲಿ/ಕಛೇರಿಗಳಲ್ಲಿ ಸಾರ್ವಜನಿಕರ ಪರಾಮರ್ಶೆಗಾಗಿ ಇಟ್ಟಿರುತ್ತೇವೆ. ಆದ್ದರಿಂದ ಸಾರ್ವಜನಿಕರು ಅದನ್ನು ಉಪಯೋಗಿಸಿಕೊಂಡು ಅದನ್ನು ಅರ್ಥೈಸಿಕೊಂಡು ಇದರಲ್ಲಿ ಏನೇನು ಮಾಲಿನ್ಯ ನಿಯಂತ್ರಣ ಕ್ರಮಗಳನ್ನು ಅಳವಡಿಸಿಕೊಳ್ಳುತ್ತಾರೋ ಅದು ಸರಿ ಇದೆಯಾ? ಅಥವಾ ಹೆಚ್ಚಿನ ರೀತಿಯಾದ ನಿಯಂತ್ರಣ ಕ್ರಮಗಳನ್ನು ಅಳವಡಿಸಿಕೊಳ್ಳುವ ಅವಶ್ಯಕತೆ ಇದೆಯೋ? ಅನ್ನುವಂತಹ ಮಾಹಿತಿಯನ್ನು ಪಡೆದುಕೊಂಡು ಅದನ್ನು ಲಿಖಿತ ಮೂಲಕವಾಗಿ ಜಿಲ್ಲಾಧಿಕಾರಿಗಳ ಕಛೇರಿಯಾಗಲಿ ಅಥವಾ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಕಛೇರಿಗಳಾಗಲಿ ಸಲ್ಲಿಸಲಿಕ್ಕಾಗಿಯೂ ಸಹ ಅವರಿಗೆ ಅವಕಾಶವನ್ನು ನೀಡಿದ್ದೇವೆ. ಹಾಗಾಗಿಯೂ ಈ 30 ದಿನಗಳ ಕಾಲಾವಕಾಶದಲ್ಲಿ ಯಾವುದೇ ರೀತಿಯಾದ ಲಿಖಿತ ಅಭಿಪ್ರಾಯಗಳು ನಮ್ಮ ಕಛೇರಿಗೆ ಬಂದಿಲ್ಲ ಎಂದು ತಿಳಿಸುತ್ತಾ ಜೊತೆಗೆ ಕೊನೆಯ ಅವಕಾಶವಾಗಿ ಈ ಒಂದು ಸಭೆಯನ್ನು ಏರ್ಪಾಡುಮಾಡಿ ಇದರಲ್ಲಿ ಮುಕ್ತವಾಗಿ ತಮ್ಮ ಅನಿಸಿಕೆಗಳನ್ನು ನಮ್ಮ ಈ ಸಭೆಯ ಮುಖಾಂತರ ಸರ್ಕಾರಕ್ಕೆ ತಿಳಿಸುವಂತಹ ಅವಕಾಶ ಈ ಒಂದು ಸಭೆಯ ಮುಖ್ಯ ಉದ್ದೇಶವಾಗಿತ್ತು. ಈ ಸಭೆಯಲ್ಲಿ ಈಗಾಗಲೇ Environmental Consultants ರವರು ಮಾಲಿನ್ಯ ನಿಯಂತ್ರಣ ಕ್ರಮಗಳ ಬಗ್ಗೆ ವಿಷಯ ಮಂಡನೆಯನ್ನು ಮಾಡಿರುತ್ತಾರೆ. ಹಾಗೆ ವಿಷಯ ಮಂಡನೆಯ ಜೊತೆಗೆ ಅದನ್ನು ತಿಳಿದುಕೊಂಡಂತೆ ಸುಮಾರು 09 ಜನ ಸಾರ್ವಜನಿಕರು ನಮಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿರುತ್ತಾರೆ ಮುಖ್ಯವಾಗಿ ಈ 09 ಜನ ಸಾರ್ವಜನಿಕರು ಇಲ್ಲಿಗೆ ಬಂದಾಗ ಅವರು ನಾವು ಇದರ ಬಗ್ಗೆ ಅನಿಸಿಕೆಗಳನ್ನು ಹೇಳಬೇಕಾಗಿದೆ ನಾವು ಹೇಳುತ್ತೇವೆ ಎಂದು ನಮ್ಮ ಪ್ರಾದೇಶಿಕ ಕಛೇರಿ ಅಧಿಕಾರಿಗಳಿಗೆ ಅವರು ತಮ್ಮ ಹೆಸರುಗಳನ್ನು ಮುಂಚಿತವಾಗಿ ಕೊಟ್ಟಿದ್ದಾಗಿ ಅವರ ಹೆಸರುಗಳನ್ನು ಓದಿ ಅವರ ಅಭಿಪ್ರಾಯಗಳನ್ನು ಪಡೆದುಕೊಂಡಿದ್ದೇವೆ. ಆದ್ದರಿಂದ ಸಭೆಯಲ್ಲಿ ಭಾಗವಹಿಸಿರುವಂತಹ 09 ಜನರೂ ಸಹ ಈ ಪರಿಸರ ಕುರಿತು ಸಾರ್ವಜನಿಕ ಸಭೆಯಲ್ಲಿ ತಮ್ಮ ಅಭಿಪ್ರಾಯಗಳನ್ನು ಹೇಳಿದ್ದಾರೆ. ಒಂದು ಇಂಡಸ್ಟ್ರೀ ಬರಬೇಕು, ಸರ್ಕಾರದ ವತಿಯಿಂದ ಪರವಾನಿಗೆಯನ್ನು ಬೇಗ ನೀಡಬೇಕು ಇದರಿಂದ ಈ ಭಾಗದಲ್ಲಿ ರೈತರ ಆರ್ಥಿಕ ಪರಿಸ್ಥಿತಿ ಹೆಚ್ಚಾಗುತ್ತದೆ ಮತ್ತು ಉತ್ತಮಗೊಳ್ಳುತ್ತದೆ. ಇಲ್ಲಿ ಸ್ಥಳೀಯರಿಗೂ ಸಹ ಉದ್ಯೋಗ ಅವಕಾಶಕ್ಕೆ ಅನುಕೂಲವಾಗುತ್ತದೆ ಎಂದು ತಿಳಿಸಿರುತ್ತಾರೆ. ಸಂಬಂಧಪಟ್ಟಂತಹ ವಿಡಿಯೋಗ್ರಾಫ ಸಹ ನಡಿತಾ ಇದೆ ಈ ವಿಡಿಯೋಗ್ರಾಫ ಜೊತೆಯಲ್ಲಿ ತಾವು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಕ್ರೋಡಿಕರಿಸಿ ಕರ್ನಾಟಕ ಸರ್ಕಾರಕ್ಕೆ ನಮ್ಮ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಕೇಂದ್ರ ಕಛೇರಿಯ ಮುಖಾಂತರ ತಿಳಿಸಲಾಗುವುದು ಎಂದು ಹೇಳುತ್ತಾ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

11) **ಮಾನ್ಯ ಅಪರ ಜಿಲ್ಲಾಧಿಕಾರಿಗಳು:** ಎಲ್ಲರಿಗೂ ನಮಸ್ಕಾರ, ಈ ಪರಿಸರ ಕುರಿತು ಸಾರ್ವಜನಿಕ ಆಲಿಕೆ ಸಭೆ ಮೆ. ಅಂಜಲಿತಾಯಿ ಕೇನ್ಸ ಪ್ರೈವೇಟ್ ಲಿಮಿಟೆಡ್ ರವರ ಪ್ರೋಜೆಕ್ಟನ ಪರಿಸರ ಕುರಿತು ಸಾರ್ವಜನಿಕ ಆಲಿಕೆ ಸಭೆಯನ್ನು ಹಲಗಾ ಗ್ರಾಮದಲ್ಲಿ ಇವತ್ತು ಮಾಡಲಾಯಿತು ಇದಕ್ಕೆ ಸಂಬಂಧಪಟ್ಟಂತೆ Environmental Consultants ರವರು ಯೋಜನೆ ಬಗ್ಗೆ ಸವಿಸ್ತಾರವಾಗಿ ತಿಳಿಸಿದ್ದಾರೆ. ಇಲ್ಲಿ ಈ ಪರಿಸರ ಕುರಿತು ಸಾರ್ವಜನಿಕ ಆಲಿಕೆ ಸಭೆಯಲ್ಲಿ ಇಲ್ಲಿಯ ಜನರೂ ಕೂಡಾ ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದೀರಿ. ಈಗಾಗಲೇ ಇದಕ್ಕೆ

ಸಂಬಂಧಪಟ್ಟಂತೆ ವಿಡಿಯೋ ಚಿತ್ರೀಕರಣ ಕೂಡ ಆಗಿದೆ ಈ ಎಲ್ಲ ತಮ್ಮ ಅಭಿಪ್ರಾಯಗ[illegible] ಕ್ರೋಢೀಕರಿಸಿದ ವರದಿಯನ್ನು ನಾವು ಕೂಡಲೇ ಸರ್ಕಾರಕ್ಕೆ 02 ದಿವಸದೊಳಗಾಗಿ ವರದಿಯನ್ನು ಸಲ್ಲಿ[illegible] ಇಲ್ಲಿಗೆ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಕೂಡ ಮುಕ್ತಾಯಗೊಳಿಸುತ್ತೇವೆ. ಧನ್ಯವಾದಗಳು.

12) **ಶ್ರೀ. ಗೋಪಾಲಕೃಷ್ಣ ಬಿ ಸನತಂಗಿ– ಪರಿಸರ ಅಧಿಕಾರಿಗಳು ಬೆಳಗಾವಿ:** ಈ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸಿಕೊಟ್ಟಂತಹ ಮಾನ್ಯ ಅಪರ ಜಿಲ್ಲಾಧಿಕಾರಿಗಳಾದಂತಹ ಶ್ರೀ. ಅಶೋಕ ಸಾಹೇಬರಿಗೆ ನಾವು ಎಲ್ಲರ ಪರವಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಹಿರಿಯ ಪರಿಸರ ಅಧಿಕಾರಿಗಳಾದ ಶ್ರೀ. ವಿಜಯಕುಮಾರ ಕಡಕಭಾವಿಯವರಿಗೂ ಸಹ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಮತ್ತು ಈ ಯೋಜನೆಯ ಅಧ್ಯಕ್ಷರಾದಂತಹ ಡಾ. ಅಂಜಲಿತಾಯಿ ನಿಂಬಾಳ್ಕರ ಮೇಡಮ್ಮನವರಿಗೂ ಸಹ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಬಂದಂತಹ ಎಲ್ಲ ಅಧಿಕಾರಿಗಳಿಗೆ ಮತ್ತು ಮಾಧ್ಯಮದವರಿಗೆ ಮತ್ತು ಇಲ್ಲಿಗೆ ಬಂದಂತಹ ಎಲ್ಲ ಜನರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ ಮತ್ತು ಈ ವರದಿಯನ್ನು ನಾವು ಕರ್ನಾಟಕ ಸರ್ಕಾರಕ್ಕೆ ಕಳುಹಿಸಿಕೊಡುತ್ತೇವೆ ಅದರ ಪ್ರತಿ ನಮ್ಮ ಕಛೇರಿಯಲ್ಲಿ ಲಭ್ಯವಿರುತ್ತದೆ. ಧನ್ಯವಾದಗಳು.

ಇಲ್ಲಿಗೆ ಪರಿಸರ ಕುರಿತು ಸಾರ್ವಜನಿಕ ಆಲಿಕೆ ಸಭೆ ಮುಕ್ತಾಯವಾಯಿತು.

ಅಪರ ಜಿಲ್ಲಾಧಿಕಾರಿಗಳು ಮತ್ತು ಅಧ್ಯಕ್ಷರು
ಪರಿಸರ ಸಾರ್ವಜನಿಕ ಸಭೆ
ಬೆಳಗಾವಿ